**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ.**

**ಎಸ್. ಸಿ. ನಂಃ 10023 / 2018**

**ಫಿರ್ಯಾದಿದಾರರು : ದೊಡ್ಡಬಳ್ಳಾಪುರ ನಗರ ಪೋಲೀಸ್ ಠಾಣೆ**

**ವಿರುದ್ಧ**

**ಆರೋಪಿತರು :**

**ಎ-1 ಯಲ್ಲಪ್ಪ ಅಲಿಯಾಸ್ ಸೂರಿ ಅಲಿಯಾಸ್ ವಾಲೆ ಅಲಿಯೂಸ್ ತೀಟೆ**
ಬಿನ್ ನಾಗರಾಜು, 26 ವರ್ಷ, ವಾಸಃ ದುರ್ಗಮ್ಮ ದೇವಸ್ಥಾನದ ಹತ್ತಿರ ವೀರಭದ್ರನಪಾಳ್ಯ, ದೊಡ್ಡಬಳ್ಳಾಪುರ.

**ಎ-2 ಹರ್ಷ** ಬಿನ್ ರಮೇಶ, 22 ವರ್ಷ, ವಾಸಃ 10ನೇ ಕ್ರಾಸ್, ಶಾಂತಿನಗರ ದರ್ಗಾಜೋಗಹಳ್ಳಿ ಮುಖ್ಯರಸ್ತೆ, ದೊಡ್ಡಬಳ್ಳಾಪುರ

**ಎ-4 ಸುಮಂತ್** ಬಿನ್ ತಿಮ್ಮಯ್ಯ, 18 ವರ್ಷ, ವಾಸಃ ನಂಃ 534, 3ನೇ ಮುಖ್ಯ ರಸ್ತೆ , ಚೌಡೇಶ್ವರಿ ನಗರ, ಲಗ್ಗೆರೆ, ಬೆಂಗಳೂರು.

**ಎ-5 ನರಸಿಂಹ** ಬಿನ್ ರಾಜು, 22 ವರ್ಷ, ವಾಸಃ ನಂಃ 25, ಎಲ್ ಬ್ಲಾಕ್, ಲಕ್ಷ್ಮಿದೇವಿನಗರ, ಲಗ್ಗೆರೆ, ಬೆಂಗಳೂರು.

**ದಂಡ ಪ್ರಕ್ರಿಯಾ ಸಂಹಿತೆ 313 ರಡಿ ಆರೋಪಿತರ ಮುಂದುವರೆದ ಹೇಳಿಕೆ**

**ಪ್ರಶ್ನೆ: 1.** ಈ ಪ್ರಕರಣದಲ್ಲಿ ಅಭಿಯೋಜನಾ ಪರ ಸಾಕ್ಷಿದಾರರು ನುಡಿದ ಸಾಕ್ಷ್ಯವನ್ನು ನೀವು ಕೇಳಿದ್ದೀರಾ ?

**ಉತ್ತರ:**

**ಆರೋಪಿ-1 -** ಕೇಳಿರುತ್ತೇನೆ.

**ಆರೋಪಿ-2 -** ಕೇಳಿರುತ್ತೇನೆ.

**ಆರೋಪಿ-4 -** ಕೇಳಿರುತ್ತೇನೆ.

**ಆರೋಪಿ-5 -** ಕೇಳಿರುತ್ತೇನೆ.

**ಪ್ರಶ್ನೆ: 2.** ದೇವನಹಳ್ಳಿಯ ಲೀಲಾ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಮುಖ್ಯ ವೈಧ್ಯಾಧಿಕಾರಿ ಯಾಗಿದ್ದ ಡಾಃ ರಾಘವೇಂದ್ರ ಜಿ.ಸಿ. ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ **12.10.2016** ರಂದು ಸಂಜೆ **7.31** ಗಂಟೆಯ ಹಲ್ಲೆಯ ಹಿನ್ನಲೆಯಲ್ಲಿ ರಾಘವೇಂದ್ರ ಎಂಬುವವರು ಚಿಕಿತ್ಸೆಗಾಗಿ ತಮ್ಮ ಆಸ್ಪತ್ರೆಗೆ ಬಂದಿದ್ದು ಅವರನ್ನು ಪರೀಕ್ಷಿಸಿದಾಗ ಹೊಟ್ಟೆಗೆ ಚೂರಿಯಿಂದ ಚುಚ್ಚಿ ದ ಗಾಯ ಮತ್ತು ಅನೇಕ ಕಡೆ ಜಜ್ಜಿದ ಗಾಯ ಆಗಿತ್ತು ಎಂದು ಮತ್ತು ಈ ಬಗ್ಗೆ ಪರೀಕ್ಷಿಸಿ ನಿಪಿ-**10** ರ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆಂದು ಮತ್ತು ಮೇಲೆ ಹೇಳಿದ **2** ಗಾಯಗಳು ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ ಎಂದು ಮತ್ತು ಮೇಲೆ ಹೇಳಿದ ಗಾಯಗಳು ಮುದ್ದೆ ಮಾಲು **1** ರ ಚಾಕುನಿಂದ ಹಲ್ಲೆ ಮಾಡಿದರೆ ಮೇಲೆ ಹೇಳಿದ ಗಾಯಗಳು ಆಗುವ ಸಾಧ್ಯತೆ ಇರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರ:**

**ಆರೋಪಿ-1 -** ಸುಳ್ಳು

**ಆರೋಪಿ-2 -** ಸುಳ್ಳು

**ಆರೋಪಿ-4 -** ಸುಳ್ಳು

**ಆರೋಪಿ-5 -** ಸುಳ್ಳು

**ಪ್ರಶ್ನೆಃ 3.** ಬೆಂಗಳೂರು ನಗರ ಬಸವೇಶ್ವರ ಪೋಲೀಸ ಠಾಣೆಯಲ್ಲಿ ಪೋಲೀಸ ಇನ್ಸ್‌ಪೇಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುವ ಪಿ.ಡಬ್ಲೂ-11 – ಶ್ರೀ. ಕಲ್ಲಪ್ಪ ಎಸ್. ಕಾರತ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 23.10.2016 ರಂದು ಬಸವೇಶ್ವರ ಪೋಲೀಸ ಠಾಣೆ ಮೊಕದ್ದಮೆ ಸಂಖ್ಯೆ 328/2016 ರ ಪ್ರಕರಣದಲ್ಲಿ ಆರೋಪಿಗಳನ್ನು ಮತ್ತು ಮಾಲು ಪತ್ತೆಗಾಗಿ ತಮ್ಮ ಠಾಣೆಯ ಸಿಬ್ಬಂಧಿಗಳಾದ ಚಾಸಾ-20 ಪಿಎಸ್ಐ ಗೋವಿಂದರಾಜು, ಚಾಸಾ-19 ಎಎಸ್ಐ ವೈ ವಿ. ಸಿದ್ದಲಿಂಗಯ್ಯ, ಚಾಸಾ-18 ಹೆಚ್‌ಸಿ-6090 ಆರ್.ಎ ಚಂದ್ರ, ಚಾಸಾ-17 ಹೆಚ್‌ಸಿ-6059 ಮಾನಪ್ಪ ಮತ್ತು ಚಾಸಾ-16 ಪಿಸಿ-9562 ಸಿದ್ದಪ್ಪರಾವ್, ಚಾಸಾ-15 ಪಿಸಿ-9345 ನರಸಿಂಹಮೂರ್ತಿ ಮತ್ತು ಚಾಸಾ-14 ಪಿಸಿ-10998 ಗೋಪಾಲ ಇವರನ್ನು ನೇಮಿಸಿದ್ದೇನು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ**

**ಆರೋಪಿ-1 -** ಸುಳ್ಳು

**ಆರೋಪಿ-2 -** ಸುಳ್ಳು

**ಆರೋಪಿ-4 -** ಸುಳ್ಳು

**ಆರೋಪಿ-5 -** ಸುಳ್ಳು

**ಪ್ರಶ್ನೆಃ 4.** ಪಿ.ಡಬ್ಲೂ-11 – ಶ್ರೀ. ಕಲ್ಲಪ್ಪ ಎಸ್. ಕಾರತ್ ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಅದೇ ದಿವಸ ರಾತ್ರಿ 09.00 ಗಂಟೆಗೆ ಮೇಲೆ ಹೇಳಿದ ಸಿಬ್ಬಂಧಿಗಳು ಆರೋಪಿತರಾದ ಯಲ್ಲಪ್ಪ, ರಾಜೇಶ್ ಅಲಿಯಾಸ ರಾಜಿ, ಹರ್ಷ ಅಲಿಯಾಸ ಮುನ್ನಿ, ನರಸಿಂಹ ಆರ್. ಅಲಿಯಾಸ ಪರೋಟ ಮತ್ತು ಸುಮಂತ್ ಅಲಿಯಾಸ್ ಸುಳ್ಯ ಅವರನ್ನು ಮತ್ತು ಅವರು ಕೃತ್ಯಕ್ಕೆ ಉಪಯೋಗಿಸಿದ್ದ 2 ದ್ವಿಚಕ್ರ ವಾಹನಗಳನ್ನು ತಂದು ತನ್ನ ಮುಂದೆ ಹಾಜರುಪಡಿಸಿ ನಿಪಿ-12 ರ ವರದಿಯನ್ನು ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ**

**ಆರೋಪಿ-1 -** ಸುಳ್ಳು

**ಆರೋಪಿ-2 -** ಸುಳ್ಳು

**ಆರೋಪಿ-4 -** ಸುಳ್ಳು

**ಆರೋಪಿ-5 -** ಸುಳ್ಳು

**ಪ್ರಶ್ನೆಃ 5.** ಪಿ.ಡಬ್ಲೂ-11 – ಶ್ರೀ. ಕಲ್ಲಪ್ಪ ಎಸ್. ಕಾರತ್ ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಅದೇ ದಿವಸ ಆರೋಪಿಗಳಾದ ಯಲ್ಲಪ್ಪ, ರಾಜೇಶ, ಹರ್ಷ ಮತ್ತು ಸುಮಂತ್ ಅವರ ಸ್ವ ಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ**

**ಆರೋಪಿ-1 -** ಸುಳ್ಳು

**ಆರೋಪಿ-2 -** ಸುಳ್ಳು

**ಆರೋಪಿ-4 -** ಸುಳ್ಳು

**ಪ್ರಶ್ನೆಃ 6.** ಪಿ.ಡಬ್ಲೂ-11 – ಶ್ರೀ. ಕಲ್ಲಪ್ಪ ಎಸ್. ಕಾರತ್ ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ 1 ನೇ ಆರೋಪಿ ಯಲ್ಲಪ್ಪನು ತನ್ನ ಸ್ವ ಇಚ್ಚಾ ಹೇಳಿಕೆಯಲ್ಲಿ ದೊಡ್ಡಬಳ್ಳಾಪುರ ಮತ್ತು ಅದರ ಸುತ್ತಮುತ್ತ ಅಪರಾಧ ಕೃತ್ಯಗಳನ್ನು ಮಾಡಿರುತ್ತೇವೆಂದು ಮತ್ತು ತನ್ನ ಹೇಳಿಕೆಯಲ್ಲಿ ದೊಡ್ಡಬಳ್ಳಾಪುರದ ಶ್ರೀನಗರದಲ್ಲಿರುವ ಎಂ.ಎ. ರಘು ಅವರ ಮನೆಗೆ ತಾನು, ಹರ್ಷ, ರಾಜೇಶ ಮತ್ತು ಸುಮಂತ್ ಎಲ್ಲರೂ ಸೇರಿಕೊಂಡು ಹೋಗಿ ಕೈಕಾಲುಗಳಿಗೆ ಹೊಡೆದೆವು ಎಂದು ಮತ್ತು ಎಂ.ಎ. ರಘು ಅವರನ್ನು ಸಾಯಿಸಬೇಕೆಂದು ಅವರಿಗೆ ತಾನು ಚಾಕುನಿಂದ ಚುಚ್ಚಿರುತ್ತೇನೆಂದು ಮತ್ತು ಅವರನ್ನು ಬಿಡಿಸಲು ಬಂದ ಅವರ ತಾಯಿಗೆ ಕೈಗಳಿಂದ ಹೊಡೆದು ಅಲ್ಲಿಂದ ಪರಾರಿಯಾಗಿರುತ್ತೇನೆಂದು ಮತ್ತು ಡ್ರ್ಯಾಗರ್ ಚಾಕುವನ್ನು ಇಟ್ಟಿದ್ದ ಸ್ಥಳವನ್ನು ತೋರಿಸುತ್ತೇವೆಂದು ಹಾಗೂ ಕೃತ್ಯ ನಡೆದ ಸ್ಥಳಗಳನ್ನು ತೋರಿಸುತ್ತೇವೆಂದು ಹೇಳಿಕೆ ನೀಡಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ**

**ಆರೋಪಿ-1 -** ಸುಳ್ಳು

**ಪ್ರಶ್ನೆಃ 7.** ಪಿ.ಡಬ್ಲೂ-11 – ಶ್ರೀ. ಕಲ್ಲಪ್ಪ ಎಸ್. ಕಾರತ್ ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಅದೇ ರೀತಿ ಉಳಿದ ಆರೋಪಿಗಳಾದ ರಾಜೇಶ, ಹರ್ಷ ಮತ್ತು ಸುಮಂತ ಸಹ ಅದನ್ನೇ ನುಡಿ ದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ**

**ಆರೋಪಿ-2 -** ಸುಳ್ಳು

**ಆರೋಪಿ-4 -** ಸುಳ್ಳು

**ಪ್ರಶ್ನೆಃ 8.** ಪಿ.ಡಬ್ಲೂ-11 – ಶ್ರೀ. ಕಲ್ಲಪ್ಪ ಎಸ್. ಕಾರತ್ ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಸದರಿಯವರ ಹೇಳಿಕೆಯ ಮೇರೆಗೆ ಕೃತ್ಯವು ದೊಡ್ಡಬಳ್ಳಾಪುರದ ನಗರ ಪೋಲೀಸ ಠಾಣೆಯ ವ್ಯಾಪ್ತಿಯಲ್ಲಿ ನಡೆದ ಆಧಾರದಲ್ಲಿ ಸದರಿ ವಿಚಾರವನ್ನು ಠಾಣಾಧಿಕಾರಿಗಳಿಗೆ ತಿಳಿಸಿದ್ದು ಸದರಿಯವರು ಆ ಬಗ್ಗೆ ಠಾಣೆಯಲ್ಲಿ ಶಶಿಕುಮಾರ್ ಎಂಬುವವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಾಗಿರುತ್ತದೆಂಬ ವಿಚಾರವನ್ನು ತಿಳಿಸಿರುತ್ತಾರೆ ಎಂದು ಮತ್ತು ನಂತರ ನ್ಯಾಯಾಲಯದ ಆದೇಶದ ಮೇರೆಗೆ ಸಂಬಂಧಪಟ್ಟ ದಾಖಲೆಗಳ ದೃಢೀಕೃತ ನಕಲಿನೊಂದಿಗೆ ದೊಡ್ಡಬಳ್ಳಾಪುರ ನಗರ ಪೋಲೀಸ ಠಾಣೆಗೆ ದಾಖಲೆಗಳನ್ನು ಕಳುಹಿಸಿಕೊಟ್ಟಿರುತ್ತೇನ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ**

**ಆರೋಪಿ-1 -** ಸುಳ್ಳು

**ಆರೋಪಿ-2 -** ಸುಳ್ಳು

**ಆರೋಪಿ-4 -** ಸುಳ್ಳು

**ಆರೋಪಿ-5 –** ಸುಳ್ಳು

**ಪ್ರಶ್ನೆಃ 9.** ಮೈಸೂರಿನ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯದ ಹಿರಿಯ ವೈಜ್ಞಾನಿಕ ಅಧಿಕಾರಿ ಮತ್ತು ಸಹಾಯಕ ನಿರ್ದೇಶಕರಾದ ಪಿ.ಡಬ್ಲೂ-13 ಡಾಃ ರಾಧಾ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ

ದಿನಾಂಕಃ 15.12.2016 ರಂದು ದೊಡ್ಡಬಳ್ಳಾಪುರ ನಗರ ಪೋಲೀಸು ಠಾಣೆಯ ಹೆಚ್.ಸಿ. – 568 ನಟರಾಜ ಎ.ಸಿ. ರವರು ಅವರ ಠಾಣಾ ಮೊಕದ್ದಮೆ ಸಂಖ್ಯೆ 184/2016 ಕ್ಕೆ ಸಂಬಂಧಪಟ್ಟಂತೆ 5 ವಸ್ತುಗಳನ್ನು ವಿಶ್ಲೇಷಣೆಗಾಗಿ ನೀಡಿರುತ್ತಾರೆ ಎಂದು ಮತ್ತು ಸದರಿ ವಸ್ತುಗಳನ್ನು ತಮ್ಮ ಸ್ವಾಗತ ವಿಭಾಗದವರು ಸ್ವೀಕರಿಸಿ ಕಚೇರಿ ಸಂಖ್ಯೆ ಆರ್‌ಎಫ್‌ಎಸ್‌ಎಲ್/ಬಿಎಸ್ 1612/2016 ನ್ನು ನೀಡಿ ತಮ್ಮ ಜೀವಶಾಸ್ತ್ರ ವಿಭಾಗಕ್ಕೆ ಕಳುಹಿಸಿರುತ್ತಾರೆ ಎಂದು ಮತ್ತು ತಮ್ಮ ಆಗಿನ ಸಹಾಯಕ ನಿರ್ದೇಕರಾಗಿದ್ದ ಡಾ|| ಚಂದ್ರಶೇಖರ್‌ರವರು ಸದರಿ ವಸ್ತುಗಳನ್ನು ವಿಶ್ಲೇಷಿಸಿ ವರದಿ ನೀಡುವಂತೆ ತನಗೆ ನೀಡಿರುತ್ತಾರೆ ಎಂದು ಮತ್ತು ಸದರಿ ವಸ್ತುಗಳನ್ನು ತಾನು ತೆಗೆದುಕೊಂಡು ನೋಡಲಾಗಿ ಅವುಗಳ ಮೇಲೀನ ಸೀಲು ಸುಸ್ತಿಯಲ್ಲಿದ್ದು ತನಿಖಾಧಿಕಾರಿಗಳು ಕಳುಹಿಸಿದ ಮಾದರಿ ಸಹಿಯೊಂದಿಗೆ ಹೊಲಿಕೆಯಾಗಿ ಕಂಡುಬಂದಿರುತ್ತದೆ ಎಂದು ಮತ್ತು ಸದರಿ ವಸ್ತುಗಳನ್ನು ಬಿಚ್ಚಿ ನೋಡಲಾಗಿ ವಸ್ತು ಸಂಖ್ಯೆ -

1. ರಕ್ತದ ಕಲೆಯಾದ ಹತ್ತಿಯ ತುಂಡುಗಳು
2. ಒಂದು ನಿಕ್ಕರ್
3. ಒಂದು ಕಾಚಾ
4. ಒಂದು ಚಾಕು
5. ಒಂದು ಪೈಪ್

ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ**

**ಆರೋಪಿ-1 -** ಸುಳ್ಳು

**ಆರೋಪಿ-2 -** ಸುಳ್ಳು

**ಆರೋಪಿ-4 -** ಸುಳ್ಳು

**ಆರೋಪಿ-5 -** ಸುಳ್ಳು

**ಪ್ರಶ್ನೆಃ 10.** ಮೈಸೂರಿನ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯದ ಹಿರಿಯ ವೈಜ್ಞಾನಿಕ ಅಧಿಕಾರಿ ಮತ್ತು ಸಹಾಯಕ ನಿರ್ದೇಶಕರಾದ ಪಿ.ಡಬ್ಲೂ-13 ಡಾಃ ರಾಧಾ ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ತಾನು ಸದರಿ ವಸ್ತುಗಳನ್ನು ರಾಸಾಯನಿಕ ಮತ್ತು ಸಿರಿಯಾಲಾಜಿ ಪರೀಕ್ಷೆಗೆ ಒಳಪಡಿಸಿರುತ್ತೇನೆ ಎಂದು ಮತ್ತು ತನ್ನ ಪರೀಕ್ಷಾ ಫಲಿತಾಂಶದಂತೆ ವಸ್ತುಸಂಖ್ಯೆ 1 ರಿಂದ 5 ರ ಎಲ್ಲಾ ವಸ್ತುಗಳ ಮೇಲೆ ರಕ್ತದ ಕಲೆಗಳು ಕಂಡುಬಂದಿದ್ದು, ಸದರಿ ವಸ್ತು ಸಂಖ್ಯೆ 1 ರಿಂದ 4 ರ ಮೇಲೆ ಇರುವ ರಕ್ತದ ಕಲೆಗಳು ಮನುಷ್ಯರದ್ದಾಗಿದ್ದು, ಸದರಿ ರಕ್ತವು ಬಿ ಗುಂಪಿಗೆ ಸೇರಿರುತ್ತದೆಂಬುದು ಕಂಡುಬಂದಿರುತ್ತದೆ ಎಂದು ಮತ್ತು ವಸ್ತು ಸಂಖ್ಯೆ 5 ರ ರಕ್ತದ ಕಲೆಗಳು ಸ್ವಲ್ಪ ಇದ್ದುದರಿಂದ ಅವುಗಳ ರಕ್ತದ ಗುಂಪನ್ನು ನಿರ್ಣಯಿಸಲು ಸಾಧ್ಯವಾಗಲಿಲ್ಲ ಎಂದು ಮತ್ತು ಪರೀಕ್ಷಿಸಿದ ನಂತರ ಎಲ್ಲಾ ವಸ್ತುಗಳನ್ನು ಮರುಪ್ಯಾಕ್ ಮಾಡಿ ತಮ್ಮ ಕಚೇರಿಯ ಮೋಹರಿನೊಂದಿಗೆ ಸೀಲು ಮಾಡಿ ಸಂಬಂಧಿಸಿದ ಪೋಲೀಸರಿಗೆ ವಾಪಸ್ಸು ನೀಡಿರುತ್ತೇನೆ ಎಂದು ಮತ್ತು ನಿ.ಪಿ-17 ರ ವರದಿಯನ್ನು ತಮ್ಮ ಇಲಾಖಾ ಮುಖ್ಯಸ್ಥರ ಮೂಲಕ ಸಂಬಂಧಪಟ್ಟ ತನಿಖಾಧಿಕಾರಿಗಳಿಗೆ ಕಳುಹಿಸಿರುತ್ತೇನ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ**

**ಆರೋಪಿ-1 -** ಸುಳ್ಳು

**ಆರೋಪಿ-2 -** ಸುಳ್ಳು

**ಆರೋಪಿ-4 -** ಸುಳ್ಳು

**ಆರೋಪಿ-5 -** ಸುಳ್ಳು

**ಪ್ರಶ್ನೆಃ 11.** ದೊಡ್ಡಬಳ್ಳಾಪುರ ನಗರ ಪೋಲೀಸ್ ಠಾಣೆಯ ಪಿ.ಎಸ್.ಐ ಆಗಿದ್ದ ಪಿ.ಡಬ್ಲೂ-14 ಶ್ರೀ. ಜಗದೀಶ್ ಕೆ.ಎಸ್. ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 12.10.2016 ರಂದು

ತಾನು ಬೆಂಗಳೂರಿನ ಅಮೃತಹಳ್ಳಿ ಪೋಲಿಸ್ ಠಾಣೆಯಿಂದ ತಮ್ಮ ಠಾಣಾ ವ್ಯಾಪ್ತಿಯ ಗಾಯಾಳು ಬೆಂಗಳೂರಿನ ಬ್ಯಾಟರಾಯಪುರದ ಪ್ರೋ ಲೈಫ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡಯುತ್ತಿದ್ದಾನೆಂದು ಬಂದ ಮಾಹಿತಿ ಮೇರೆಗೆ ತಾನು ಆಸ್ಪತ್ರೆಗೆ ಬೇಟಿ ನೀಡಿರುತ್ತೇನೆ ಎಂದು ಮತ್ತು ಅಲ್ಲಿ ಹೋಗಿ ನೋಡಿದಾಗ ಗಾಯಾಳು ರಘುನಾಥರವರು ಚಿಕಿತ್ಸೆ ಪಡೆಯುತ್ತಿದ್ದು ಅವರು ಹೇಳಿಕೆ ಕೊಡುವ ಸ್ಥಿತಿಯಲ್ಲಿರಲಿಲ್ಲವೆಂದು ಮತ್ತು ಅವರು ಚಿಕಿತ್ಸೆಗೆ ಸೇರಿಸಿದ ಅವರ ತಮ್ಮ ಶಶಿಕುಮಾರ್ ನು ಅಲ್ಲಿದ್ದು ಅವರನ್ನು ವಿಚಾರಿಸಿ ನಿಪಿ-1 ರ ಹೇಳಿಕೆಯನ್ನು ಪಡೆದುಕೊಂಡು ಠಾಣೆಗೆ ವಾಪಸ್ ಬಂದು ಪ್ರಕರಣವನ್ನು ದಾಖಲಿಸಿಕೊಂಡು ನಿಪಿ-18 ರ ಪ್ರಥಮ ವರ್ತಮಾನ ವರದಿಯನ್ನು ಘನ ನ್ಯಾಯಾಲಯಕ್ಕೆ ಮತ್ತು ಇಲಾಖೆಯ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ**

**ಆರೋಪಿ-1 -** ಸುಳ್ಳು

**ಆರೋಪಿ-2 -** ಸುಳ್ಳು

**ಆರೋಪಿ-4 -** ಸುಳ್ಳು

**ಆರೋಪಿ-5 -** ಸುಳ್ಳು

**ಪ್ರಶ್ನೆಃ 12.** ಪಿ.ಡಬ್ಲೂ-14 ಶ್ರೀ. ಜಗದೀಶ್ ಕೆ.ಎಸ್. ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ನಂತರ ಅದೇ ದಿನ ದಿನಾಂಕಃ 12.10.2016 ರಂದು ಘಟನಾ ಸ್ಥಳವಾದ ದೊಡ್ಡಬಳ್ಳಾಪುರದ ಶ್ರೀ ನಗರದಲ್ಲಿರುವ ಶ್ರೀಮತಿ. ರಾಜಮ್ಮ ಕೋಂ ಮೃತ ಹೊನ್ನಯ್ಯರವರ ವಾಸದ ಮನೆಯ ಬಳಿ ಹೋಗಿ ಶ್ರೀಮತಿ. ರಾಜಮ್ಮರವರ ತೋರಿಸಿದ ಸ್ಥಳದಲ್ಲಿ ಚಾಸಾ 6 ಮುನಿರಾಜು

ಮತ್ತು ಚಾಸಾ 7 ಶಿವಕುಮಾರರವರ ಸಮಕ್ಷಮದಲ್ಲಿ ಸ್ಥಳ ಪರಿಶೀಲಿಸಿ ಸ್ಥಳದಲ್ಲಿ ಸೀಮೆಂಟ್ ನೆಲದ ಮೇಲೆ ಮತ್ತು ಬಾಗಿಲಿನ ಮೇಲೆ ಇರುವ ರಕ್ತದ ಕಲೆಗಳನ್ನು ಪರಿಶೀಲಿಸಿ ಅದನ್ನು ಹತ್ತಿ ಚೂರಿನಿಂದ ಸಂಗ್ರಹಿಸಿ ಅದನ್ನು ಪ್ಲಾಸ್ಟಿಕ್ ಡಬ್ಬದಲ್ಲಿ ಸಂಗ್ರಹಿಸಿ ಸ್ಥಳದಲ್ಲಿ 2.30 ರಿಂದ 3.15 ಗಂಟೆಯವರೆಗೆ ನಿ.ಪಿ-5 ರಂತೆ ಪಂಚನಾಮೆಯನ್ನು ಜರುಗಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ**

**ಆರೋಪಿ-1 -** ಸುಳ್ಳು

**ಆರೋಪಿ-2 -** ಸುಳ್ಳು

**ಆರೋಪಿ-4 -** ಸುಳ್ಳು

**ಆರೋಪಿ-5 -** ಸುಳ್ಳು

**ಪ್ರಶ್ನೆಃ 13.** ಪಿ.ಡಬ್ಲೂ-14 ಶ್ರೀ. ಜಗದೀಶ್ ಕೆ.ಎಸ್. ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ನಂತರ ಆರೋಪಿತರ ಪತ್ತೆಗಾಗಿ ಇಲಾಖಾ ಸಿಬ್ಬಂದಿಗಳಾದ ಹೆಚ್ ಸಿ 427 ಶಿವರಾಜಯ್ಯ ಮತ್ತು ಇತರೆ ಸಿಬ್ಬಂದಿಗಳನ್ನು ನೇಮಿಸಿರುತ್ತೇನೆ ಎಂದು ಮತ್ತು ದಿನಾಂಕ 24.10.2016 ರಂದು ಬೆಂಗಳೂರಿನ ಬಸವೇಶ್ವರನಗರ ಪೊಲೀಸ್ ಠಾಣೆಯ ಕ್ರೈಂ ನಂಬರ್ 328/2016 ರಲ್ಲಿ 5 ಜನ ಆಸಾಮಿಗಳನ್ನು ದಸ್ತಗಿರಿ ಪಡಿಸಿ ವಿಚಾರಿಸಿದಾಗ, ವಿಚಾರಣೆಯ ಸಮಯದಲ್ಲಿ ಅವರು ದೊಡ್ಡಬಳ್ಳಾಪುರದ ನಗರ ಪೊಲೀಸ್ ಠಾಣೆಯ ಈ ಪ್ರಕರಣದ ಕ್ರೈಂ ನಂಬರ್ 184/2016 ರ

ಪ್ರಕರಣದಲ್ಲಿ ಭಾಗಿಯಾಗಿರುತ್ತಾರೆಂದು ಮಾಹಿತಿ ಬಂದಿದ್ದು ಅದನ್ನು ತಿಳಿದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ**

**ಆರೋಪಿ-1 -** ಸುಳ್ಳು

**ಆರೋಪಿ-2 -** ಸುಳ್ಳು

**ಆರೋಪಿ-4 -** ಸುಳ್ಳು

**ಆರೋಪಿ-5 -** ಸುಳ್ಳು

**ಪ್ರಶ್ನೆಃ 14.** ಪಿ.ಡಬ್ಲೂ-14 ಶ್ರೀ. ಜಗದೀಶ್ ಕೆ.ಎಸ್. ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ದಿನಾಂಕ 09.11.2016 ರಂದು ಪಿರ್ಯಾದುದಾರರಾದ ಶಶಿಕುಮಾರ್ ರವರ ತಾಯಿ ಚಾಸಾ 3 ರಾಜಮ್ಮ ರವರು ಗಾಯಾಳು ರಘುನಾಥರವರು ಕೃತ್ಯದ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಆಸ್ಪತ್ರೆಯಿಂದ ಠಾಣೆಗೆ ತಂದು ಹಾಜರುಪಡಿಸಿದ್ದರ ಮೇರೆಗೆ ಪಂಚರಾದ ಚಾಸಾ 7 ಶಿವಕುಮಾರ್ ಮತ್ತು ಚಾಸಾ 8 ರವರ ಸಮಕ್ಷಮದಲ್ಲಿ ಬೆಳಗ್ಗೆ 10.45ರಿಂದ 11.33 ರವರೆಗೆ ನಿ.ಪಿ-6 ರ ಪಂಚನಾಮೆ ಜರುಗಿಸಿ ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ**

**ಆರೋಪಿ-1 -** ಸುಳ್ಳು

**ಆರೋಪಿ-2 -** ಸುಳ್ಳು

**ಆರೋಪಿ-4 -** ಸುಳ್ಳು

**ಆರೋಪಿ-5 -** ಸುಳ್ಳು

**ಪ್ರಶ್ನೆ: 15.** ಪಿ.ಡಬ್ಲೂ-14 ಶ್ರೀ. ಜಗದೀಶ್ ಕೆ.ಎಸ್. ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ನಂತರ ದಿನಾಂಕ 19.11.2016 ರಂದು ಆರೋಪಿತರು ಬಸವೇಶ್ವರ ನಗರ ಪೋಲಿಸ್ ಠಾಣೆಯ ಕ್ರೈಂ ನಂಬರ್ 328/2016 ರಲ್ಲಿ ದಸ್ತಗಿರಿಯಾಗಿ ಕೇಂದ್ರಕಾರಗೃಹದಲ್ಲಿ ಇದ್ದದ್ದರಿಂದ ನ್ಯಾಯಾಲಯದ ಬಾಡಿ ವಾರಂಟಿನ ಮೇರೆಗೆ ಹಾಜರುಪಡಿಸಲು ಮನವಿ ಸಲ್ಲಿಸಿರುತ್ತೇನೆ ಎಂದು ಮತ್ತು ನ್ಯಾಯಾಲಯದ ಅನುಮತಿಯ ಮೇರೆಗೆ ಆರೋಪಿತರಾದ 1) ಯಲ್ಲಪ್ಪ 2) ಹರ್ಷ 3) ರಾಜೇಶ 4) ಸುಮಂತ್ ಮತ್ತು 5) ನರಸಿಂಹರವರನ್ನು ಬಾಡಿ ವಾರಂಟಿನ ಮೇರೆಗೆ ಪೋಲಿಸ್ ಕಸ್ಟಡಿಗೆ ನೀಡುವಂತೆ ಕೋರಿರುತ್ತೇನೆ ಎಂದು ಮತ್ತು ಅದರಂತೆ ದಿನಾಂಕ 21.11.2016 ರಿಂದ ದಿನಾಂಕ 22.11.2016 ರವರೆಗೆ ಎರಡು ದಿನಗಳ ಕಾಲ ಮೇಲ್ಕಂಡ ಆರೋಪಿತರನ್ನು ಪೋಲಿಸ್ ಅಬಿರಕ್ಷೆಗೆ ನೀಡಿರುತ್ತಾರೆ ಎಂದು ಮತ್ತು ಸದರಿ ಆರೋಪಿತರನ್ನು ವಶಕ್ಕೆ ಪಡೆದುಕೊಂಡು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರ:**

**ಆರೋಪಿ-1 -** ಸುಳ್ಳು

**ಆರೋಪಿ-2 -** ಸುಳ್ಳು

**ಆರೋಪಿ-4 -** ಸುಳ್ಳು

**ಆರೋಪಿ-5 -** ಸುಳ್ಳು

**ಪ್ರಶ್ನೆಃ 16.** ಪಿ.ಡಬ್ಲೂ-14 ಶ್ರೀ. ಜಗದೀಶ್ ಕೆ.ಎಸ್. ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ನಂತರ ದಿನಾಂಕ 21.11.2016 ರಂದು ಆರೋಪಿತರಾದ 1) ಯಲ್ಲಪ್ಪ 2) ಹರ್ಷ 4) ಸುಮಂತ್ ಮತ್ತು 5) ನರಸಿಂಹರವರನ್ನು ವಿಚಾರಿಸಿ ಅವರ ಸ್ವ ಇಚ್ಚಾ ಹೇಳಿಕೆ ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ**

**ಆರೋಪಿ-1 -** ಸುಳ್ಳು

**ಆರೋಪಿ-2 -** ಸುಳ್ಳು

**ಆರೋಪಿ-4 -** ಸುಳ್ಳು

**ಆರೋಪಿ-5 -** ಸುಳ್ಳು

**ಪ್ರಶ್ನೆಃ 17.** ಪಿ.ಡಬ್ಲೂ-14 ಶ್ರೀ. ಜಗದೀಶ್ ಕೆ.ಎಸ್. ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಆರೋಪಿ ಯಲ್ಲಪ್ಪನು ತನ್ನ ಸ್ವ ಇಚ್ಚಾ ಹೇಳಿಕೆಯಲ್ಲಿ ತನ್ನನ್ನು ಕರೆದುಕೊಂಡು ಹೆ ೋದರೆ ರಾಡು ಮತ್ತು ಚಾಕುವನ್ನು ಸ್ಥಳವನ್ನು ತೋರಿಸುತ್ತೇನೆಂದು ಒಪ್ಪಿ ಕೊಂಡಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ**

**ಆರೋಪಿ-1 -** ಸುಳ್ಳು

**ಪ್ರಶ್ನೆಃ 18.** ಪಿ.ಡಬ್ಲೂ-14 ಶ್ರೀ. ಜಗದೀಶ್ ಕೆ.ಎಸ್. ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ದಿನಾಂಕ 22.11.2016 ರಂದು ಪಂಚರಾದ ಚಾಸಾ 9 ಚಂದ್ರಶೇಖರ್ ಮತ್ತು ಚಾಸಾ 10 ರಮೇಶ್ ರವರನ್ನು ಠಾಣೆಗೆ ಪಂಚರಾಗಿ ಕರೆಸಿ ಆರೋಪಿ ನೀಡಿದ್ದ ಮಾಹಿತಿಯನ್ನು ತಿಳಿಸಿದ್ದು, ಆರೋಪಿಯ ಮಾರ್ಗ ದರ್ಶನದಂತೆ ದೊಡ್ಡಬಳ್ಳಾಪುರ ನಗರಕ್ಕೆ ಬರುವ ರೈಲ್ವೆ ಸ್ಟೇಷನ್ ಬರುವ ಒಂದು ಕಾಡು ಜಾತಿಯ ಮರ ಇರುವ ಜಾಗಕ್ಕೆ ಕರೆದುಕೊಂಡು ಹೋಗಿ ಸದರಿ ಮರದ ಕೆಳಗ ಬಿದಿದ್ದ ದೊಡ್ಡ ಸಿಮೆಂಟ್ ಕಾಂಕ್ರಿಟ್ ದಿಂಡುಗಳನ್ನು ತೋರಿಸಿ ಇದೇ ದಿಂಡುಗಳ ಸಂದಿಯಲ್ಲಿ ಆಯುದಗಳನ್ನು ಇಟ್ಟಿರುವುದಾಗಿ ತೋರಿಸಿ ತೆಗೆದು ಹಾಜರುಪಡಿಸಿದ್ದು ಪರಿಶೀಲಿಸಿ ನೋಡಿದಾಗ ರಕ್ತದ ಕಲೆಯಾಗಿದ್ದ 9 ಇಂಚು ಉದ್ದದ steal ಚಾಕುವಾಗಿರುತ್ತದೆ ಮತ್ತು ರಕ್ತದ ಕಲೆಯಾಗಿದ್ದ 2 ವರೆ ಅಡಿ ಉದ್ದದ steal ಪೈಪು/ರಾಡು ಆಗಿರುತ್ತದೆ ಎಂದು ಅವುಗಳನ್ನು ಪಂಚರ ಸಮಕ್ಷಮದಲ್ಲಿ ಮಧ್ಯಾಹ್ನ 12.30 ರಿಂದ 1.30 ಗಂಟೆ ಸಮಯದಲ್ಲಿ ನಿ.ಪಿ-11 ರ ಮಹಜರ್ ಜರುಗಿಸಿ ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ**

**ಆರೋಪಿ-1 -** ಸುಳ್ಳು

**ಪ್ರಶ್ನೆ: 19.** ಪಿ.ಡಬ್ಲೂ-14 ಶ್ರೀ. ಜಗದೀಶ್ ಕೆ.ಎಸ್. ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ನಂತರ ಅದೇ ದಿನ ಆರೋಪಿತರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ ನ್ಯಾಯಾಂಗ ಬಂದನಕ್ಕೆ ಅದೇಶಿಸಲು ಕೋರಿದ್ದು ಅದೇ ರೀತಿ ನ್ಯಾಯಾಲಯವು ಆರೋಪಿತರಾದ ಯಲ್ಲಪ್ಪ, ಹರ್ಷ, ಸುಮಂತ್ ಮತ್ತು ನರಸಿಂಹಯ್ಯ ರವರನ್ನು ನ್ಯಾಯಾಂಗ ಬಂದನಕ್ಕೆ ಆದೇಶಿಸಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರ:**

**ಆರೋಪಿ-1 -** ಸುಳ್ಳು

**ಆರೋಪಿ-2 -** ಸುಳ್ಳು

**ಆರೋಪಿ-4 -** ಸುಳ್ಳು

**ಆರೋಪಿ-5 -** ಸುಳ್ಳು

**ಪ್ರಶ್ನೆ: 20.** ಪಿ.ಡಬ್ಲೂ-14 ಶ್ರೀ. ಜಗದೀಶ್ ಕೆ.ಎಸ್. ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ದಿನಾಂಕ 23.11.2016 ರಂದು ಪ್ರತ್ಯೇಕ ಸಾಕ್ಷಿಗಳಾದ ಚಾಸಾ 1, ಶಶಿಕುಮಾರ್ ಚಾಸಾ 3 ರಾಜಮ್ಮ ಮತ್ತು ಇತರ ಸಾಕ್ಷಿದಾರರಾದ ಚಾಸಾ 4 ವರಲಕ್ಷ್ಮೀ ಮತ್ತು ಚಾಸಾ 5 ರವಿಕುಮಾರ್ ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಮತ್ತು ಅದೇ ರೀತಿ ಪಂಚರಾದ ಚಾಸಾ 9 ಚಂದ್ರಶೇಖರ್ ಮತ್ತು ಚಾಸಾ 10 ರಮೇಶ್ ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ ಎಂದು ಮತ್ತು ಚಾಸಾ 1 ಶಶಿಕುಮಾರ್ ಮತ್ತು ಚಾಸಾ 3 ರಾಜಮ್ಮರವರು ತಮ್ಮ ಹೇಳಿಕೆಯಲ್ಲಿ ತಾವು ಕೃತ್ಯದ ಸಮಯದಲ್ಲಿ ಸ್ಥಳದಲ್ಲಿ ಹಾಜರಿದ್ದ ತಮಗೂ ಸಹ ಮೂಗೇಟು ಆಗಿದ್ದು ಆದರೆ ಯಾವುದೇ

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ ಎಂದು ತಿಳಿಸಿರುತ್ತಾರೆ ಎಂದು ಮತ್ತು ದಿನಾಂಕ 12.12.2016 ರಂದು ಪ್ರಕರಣದ ಚಾಸಾ 2 ರಘುನಾಥರವರ ಹೇಳಿಕೆ ಪಡೆದುಕೊಂಡಿರುತ್ತೇನೆ ಎಂದು ಮತ್ತು ಚಿಕಿತ್ಸೆ ಪಡೆದ ಬಗ್ಗೆ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ**

**ಆರೋಪಿ-1 -** ಸುಳ್ಳು

**ಆರೋಪಿ-2 -** ಸುಳ್ಳು

**ಆರೋಪಿ-4 -** ಸುಳ್ಳು

**ಆರೋಪಿ-5 -** ಸುಳ್ಳು

**ಪ್ರಶ್ನೆಃ 21.** ಪಿ.ಡಬ್ಲೂ-14 ಶ್ರೀ. ಜಗದೀಶ್ ಕೆ.ಎಸ್. ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡ ಸ್ವತ್ತುಗಳನ್ನು ದಿನಾಂಕ 15.12.2016 ರಂದು ಇಲಾಖಾ ಸಿಬ್ಬಂದಿ ಚಾಸಾ 22 ಹೆಚ್ ಸಿ 568 ನಟರಾಜ ರವರ ಮೂಲಕ ಮೈಸೂರಿನ ಆರ್ ಎಫ್ ಎಸ್ ಎಲ್ ಗೆ ಕಳುಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ**

**ಆರೋಪಿ-1 -** ಸುಳ್ಳು

**ಆರೋಪಿ-2 -** ಸುಳ್ಳು

**ಆರೋಪಿ-4 -** ಸುಳ್ಳು

**ಆರೋಪಿ-5 -** ಸುಳ್ಳು

**ಪ್ರಶ್ನೆ: 22.** ಪಿ.ಡಬ್ಲೂ-14 ಶ್ರೀ. ಜಗದೀಶ್ ಕೆ.ಎಸ್. ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಅದೇ ದಿನ ಬೆಂಗಳೂರಿನ ಬಸವೇಶ್ವರ ನಗರ ಪೋಲಿಸ್ ಠಾಣೆಯ ಕ್ರೈಂ ನಂಬರ್ 328/2016 ರ ನಿ.ಪಿ-12 ರಿಂದ ನಿ.ಪಿ-15 ರ ದಾಖಲಾತಿಗಳನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರ:**

**ಆರೋಪಿ-1 -** ಸುಳ್ಳು

**ಆರೋಪಿ-2 -** ಸುಳ್ಳು

**ಆರೋಪಿ-4 -** ಸುಳ್ಳು

**ಆರೋಪಿ-5 -** ಸುಳ್ಳು

**ಪ್ರಶ್ನೆ: 23.** ಪಿ.ಡಬ್ಲೂ-14 ಶ್ರೀ. ಜಗದೀಶ್ ಕೆ.ಎಸ್. ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ದಿನಾಂಕ 12.01.2017 ರಂದು ಗಾಯಳು ಚಾಸಾ 2 ರಘುನಾಥರವರ ನಿ.ಪಿ-10 ರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ ಮತ್ತು ದಿನಾಂಕ 18.03.2017 ರಂದು ಮೈಸೂರಿನ ಆರ್ ಎಫ್ ಎಸ್ ಎಲ್ ನಿಂದ ನಿ.ಪಿ-17 ರ ವರದಿ ಬಂದಿದ್ದು ಅದನ್ನು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ ಎಂದು ಮತ್ತು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ದ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ**

**ಆರೋಪಿ-1 -** ಸುಳ್ಳು

**ಆರೋಪಿ-2 -** ಸುಳ್ಳು

**ಆರೋಪಿ-4 -** ಸುಳ್ಳು

**ಆರೋಪಿ-5 -** ಸುಳ್ಳು

**ಪ್ರಶ್ನೆಃ 24 ಃ** ನಿಮ್ಮ ಪರವಾಗಿ ಏನಾದರೂ ಹೇಳುವುದು ಇದೆಯಾ?

**ಉತ್ತರಃ**

**ಆರೋಪಿ-1 -** ಇಲ್ಲ.

**ಆರೋಪಿ-2 -** ಇಲ್ಲ.

**ಆರೋಪಿ-4 -** ಇಲ್ಲ.

**ಆರೋಪಿ-5 -** ಇಲ್ಲ.

**ಪ್ರಶ್ನೆಃ 25 ಃ** ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ಇದೆಯಾ?

**ಉತ್ತರಃ**

**ಆರೋಪಿ-1 -** ಇಲ್ಲ.

**ಆರೋಪಿ-2 -** ಇಲ್ಲ.

**ಆರೋಪಿ-4 -** ಇಲ್ಲ.

**ಆರೋಪಿ-5 -** ಇಲ್ಲ.

ಮೇಲೆ ಹೇಳಿದ ಪ್ರಶ್ನೆಗಳನ್ನು ಆರೋಪಿತರಿಗೆ ಓದಿ ಹೇಳಿ, ಅವರ ಉತ್ತರಗಳನ್ನು **ಬಹಿರಂಗ ನ್ಯಾಯಾಲಯದಲ್ಲಿ** ದಾಖಲು ಮಾಡಿಕೊಳ್ಳಲಾಯಿತು.

**ದಿಃ 05.03.2025.**
**ಸ್ಥಳಃ ದೊಡ್ಡಬಳ್ಳಾಪುರ**

**(ರಮೇಶ ದುರುಗಪ್ಪ ಏಕಬೋಟೆ)**
4ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದೊಡ್ಡಬಳ್ಳಾಪುರ.